ಮಾಲೂರು ತಾಲ್ಲೂಕಿನ ಮಾಸ್ತಿಯಲ್ಲಿ ಪ್ರಾಣಿಗಳ ಉದ್ಯಾನವನ ಅಭಿವೃದ್ಧಿ ಗೊಳಿಸುವುದು.

೧೭೩೦. ಶ್ರೀ ಎಚ್. ಬಿ. ದ್ಯಾವರಪ್ಪ (ಮಾಲೂರು) —ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ಮಾಲೂರು ತಾಲ್ಲೂಕು ಗೂಡಹಳ್ಳಿಯಲ್ಲಿ ಸರ್ಕಾರವು ಒಂದು ಸಫಾರಿ ಉದ್ಯಾನವನವನ್ನು ಪ್ರಾರಂಭಿಸಿದೆಯೇ?

೨) ಇದಕ್ಕಾಗಿ ಇಲ್ಲಿಯವರೆಗೆ ಖರ್ಚು ಮಾಡಿರುವ ಹಣವೆಷ್ಟು?

೩) ಉದ್ಯಾನವನದಲ್ಲಿ ಬಿಟ್ಟಿರುವ ಪ್ರಾಣಿಗಳ ಸಂಖ್ಯೆ ಎಷ್ಟು? ಹಾಗೂ ಅವುಗಳೆಲ್ಲವೂ ಜೀವಂತವಾಗಿದೆಯೇ?

೪) ಇನ್ನೂ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಏನಾದರೂ ಇದೆಯೇ?

೫) ಹಾಗಿದ್ದಲ್ಲಿ ಅದನ್ನು ಯಾವಾಗ ಕಾರ್ಯಗತ ಗೊಳಿಸಲಾಗುವುದು?

೬) ಅದರ ಅಭಿವೃದ್ಧಿ ಬಗ್ಗೆ ಪರಿಣಿತರ ಅಭಿಪ್ರಾಯ?

ಶ್ರೀ ಬಿ.ಎ. ಜೀವಿಜಯ (ಮಾನ್ಯ ಅರಣ್ಯ ರಾಜ್ಯ ಸಚಿವರು).—

೧) ಇಲ್ಲ. ಆದರೆ ಮಾಲೂರು ತಾಲ್ಲೂಕು ಸೊರಕಾಯಲಹಳ್ಳಿಯಲ್ಲಿ ಒಂದು ಸಣ್ಣ ಮೃಗಾಲಯವನ್ನು ಆರಂಭಿಸಲಾಗಿದೆ.

೨) ೯೯,೫೮೦-೦೦ ರೂಗಳು,

೩) ೩ ಚಿಗರೆ ಮತ್ತು ೨ ಕೃಷ್ಣ ಮೃಗಗಳನ್ನು ಮೃಗಾಲಯದಲ್ಲಿ ಬಿಡಲಾಗಿದ್ದು ಅವುಗಳಲ್ಲಿ ೩ ಚಿಗರೆ ಮತ್ತು ಒಂದು ಕೃಷ್ಣ ಮೃಗ ಜೀವಂತವಾಗಿವೆ.

೪) ಸದ್ಯಕ್ಕೆ ಇಲ್ಲ.

೫) ಉದ್ಭವಿಸುವುದಿಲ್ಲ.

೬) ಅಭಿವೃದ್ಧಿ ಕ್ರಮಗಳನ್ನು ಕೈಗೆತ್ತಿಕೊಂಡಾಗ ಈ ಸಲಹೆಯನ್ನು ಪರಿಶೀಲಿಸಲಾಗುವುದು.

ಶ್ರೀ ಹೆಚ್. ಬಿ. ದ್ಯಾವರಪ್ಪ —ಸುಮಾರು ಒಂದು ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ ಎಂದು ಹೇಳಿದ್ದೀರಿ. ಆದರೆ ಈಚೆಗೆ ಏನೂ ಅಭಿವೃದ್ಧಿ ಆಗಿಲ್ಲ. ತಾವು ಕೊಟ್ಟ ಉತ್ತರ ನೋಡಿದರೆ ಬಹುಶಃ ಮುಂದೆ ಅನುಕೂಲ ಮಾಡುವುದರಲ್ಲಿ ನನಗೆ ನಂಬಿಕೆ ಇಲ್ಲ. ತಾವು ಇದನ್ನು ಮಾಡಬಾರದಾಗಿತ್ತು. ಆದರೆ ಈಗಾಗಲೇ ಮಾಡಿಬಿಟ್ಟು ಹಣ ಖರ್ಚಾಗಿದೆ. ಇಷ್ಟು ಹಣ ಖರ್ಚಾಗಿರುವುದರಿಂದ ಇದನ್ನು ಈಗ ಅಭಿವೃದ್ಧಿ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಒಂದು ಲಕ್ಷ ರೂಪಾಯಿ ನೀರಿನಲ್ಲಿ ಹಾಕಿದ ಹಾಗೆ ಆಗುತ್ತದೆ. ಅದಕ್ಕೋಸ್ಕರ ಇದರ ಬಗ್ಗೆ ಸ್ಪಷ್ಟವಾದ ಭರವಸೆಯನ್ನು ನೀಡುತ್ತೀರಾ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಸಚಿವರು).—ಅಧ್ಯಕ್ಷರೇ, ವನ್ಯ ಪ್ರಾಣಿ ಸಂರಕ್ಷಣೆಗೆ ಇರುವುದು ೧೦ ಲಕ್ಷ ರೂಪಾಯಿಗಳು. ಆದರೂ ಕೂಡ ಇಲ್ಲಿ ಕೆಲವು ಮೃಗಗಳನ್ನು ಕೊಡಲಕ್ಕೆ, ಹಣಕಾಸಿನ ಇತಿಮಿತಿಯೊಳಗೆ ಸ್ವಲ್ಪ ಹಣಕೊಟ್ಟು ಸಾಧ್ಯವಾದ ಮಟ್ಟಿಗೆ ಅಭಿವೃದ್ಧಿಪಡಿಸಲಿಕ್ಕೆ ಪ್ರಯತ್ನಿಸುತ್ತೇನೆ.

ಪ್ರಶ್ನೆ ೧೯೫೪—ಶ್ರೀ ಜಿ.ಎಸ್. ಹೆಗಡೆ ಅಜ್ಜಿಬಾಳ ಅವರು ಗೈರು ಹಾಜರಿದ್ದರು.

ಪ್ರಶ್ನೆ ೧೮೦೯—ಶ್ರೀ ಕೆ. ಪಿ. ಮಾಗೆಣ್ಣವರ ಅವರು ಹಾಜರಿರಲಿಲ್ಲ.

ಪ್ರಶ್ನೆ ೧೯೬೮—ಶ್ರೀ ಶಿವಶೇಖರಪ್ಪ ಶಿರವಾಳ ಅವರು ಗೈರು ಹಾಜರಿದ್ದರು.

ಅಧ್ಯಕ್ಷರು.—ಶ್ರೀ ಕೆ. ಹೆಚ್. ಪಾಟೀಲರೇ, ನಿಮ್ಮ ಪ್ರಶ್ನೆ ಸಂಖ್ಯೆ ೬೮೦ (೪೨೯)ನ್ನು ಮುಂದೂಡಲಾಗಿದೆ.

ಪ್ರಶ್ನೆ ೧೮೬೬—ಶ್ರೀ ಸಿ.ಸಿ. ಕಲಕೋಟ ಗೈರು ಹಾಜರಿದ್ದರು.

ಪ್ರಶ್ನೆ ೧೪೨೫—ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಹಾಜರಿರಲಿಲ್ಲ.

ಪ್ರಶ್ನೆ ೫೩೭—ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರು ಹಾಜರಿರಲಿಲ್ಲ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಮಳೆಯ ಆಶ್ರಯದಲ್ಲಿರುವ ಕೆರೆಗಳು

೧೯೭೫. ಶ್ರೀ ಕೃಷ್ಣ (ಕೃಷ್ಣರಾಜಪೇಟೆ).—ಮಾನ್ಯ ಲೋಕೋಪಯೋಗಿ ಜಲಾನಯನಪ್ರದೇಶ ಅಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಮಳೆಯ ಆಶ್ರಯದಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು ಹಾಗೂ ಆದರಿಂದ ಸಾಗುವಳಿಯಾಗುವ ಜಮೀನಿನ ವಿಸ್ತೀರ್ಣ ಎಷ್ಟು?

ಆ) ಅನೇಕ ವರ್ಷಗಳಿಂದ ಈ ಕೆರೆಗಳಲ್ಲಿ ಹೂಳು ತೆಗೆಯುವ ಕಾರ್ಯ ಕೈಗೊಳ್ಳದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ ಈ ವರ್ಷ ಮಳೆಯಾದೇ ಎಲ್ಲಾ ಕೆರೆಗಳೂ ಒಣಗಿರುವುದರಿಂದ ಅವುಗಳ ಹೂಳು ತೆಗೆದು ಆಳ ಮಾಡುವ ಕಾರ್ಯಕ್ರಮವನ್ನು ಸರ್ಕಾರವನ್ನು ತೆಗೆದುಕೊಳ್ಳುವರೇ?

ಈ) ಈ ವರ್ಷ ತಾಲ್ಲೂಕಿನ ಎಷ್ಟು ಕೆರೆಗಳಲ್ಲಿ ಹೂಳು ತೆಗೆಯುವ ಹಾಗೂ ಆಳ ಮಾಡುವ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ. ಹಾಗಿಲ್ಲದಿದ್ದಲ್ಲಿ ಸದರಿ ಕಾರ್ಯಕ್ರಮವನ್ನು ಈಗ ತೆಗೆದು ಕೊಳ್ಳಲಾಗುವುದೇ?

ಶ್ರೀ ಹೆಚ್.ಡಿ ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೪೦. ೨೭೦೦ ಹೆಕ್ಟೇರುಗಳು.

ಆ) ಹೌದು.

ಇ) ಪರಿಶೀಲನೆಯಲ್ಲಿದೆ.

ಈ) ಹಣಕಾಸಿನ ಲಭ್ಯತೆಯನ್ನವಲಂಬಿಸಿ, ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

ಕಾರಂಜಾ ಯೋಜನೆ

೧೯೫೯. ಶ್ರೀ ಬಸವರಾಜ ಪಾಟೀಲ್ (ಹುಮನಾಬಾದ್).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಕಾರಂಜಾ ಯೋಜನೆಗೆ ನಿಗಧಿಪಡಿಸಲಾದ ಹಣವೆಷ್ಟು?

ಆ) ಇಲ್ಲಿಯವರೆಗೆ ಸರ್ಕಾರದವರು ಎಷ್ಟು ಹಣವನ್ನು ನೀಡಿದ್ದಾರೆ ಹಾಗೂ ಕೊಡಬೇಕಾದ ಹಣವೆಷ್ಟು?

ಇ) ೧೯೮೪-೮೫ನೇ ಸಾಲಿನಲ್ಲಿ ಯೋಜನೆಗಾಗಿ ಖರ್ಚು ಮಾಡಿದ ಹಣವೆಷ್ಟು?

ಈ) ಕಾರಂಜಾ ಯೋಜನೆಯನ್ನು ಎಷ್ಟು ವರ್ಷಗಳಲ್ಲಿ ಪೂರ್ತಿಗೊಳಿಸಬೇಕಾಗಿತ್ತು. ಹಾಗೂ ಆದನ್ನು ಎಂದು ಪೂರ್ಣಗೊಳಿಸಲಾಗುವುದು?